sdmimd

## Samyukta Karnataka

Date: 26 August 2015 Page No. 08

Edition: Bangalore Language: Kannada

# ಸುಸ್ಥಿರ ಆರ್ಥಿಕ ಅಭಿವೃದ್ಧಿ ಅಗತ್ಯ: ಭಾಗವತ್

ಮೈಸೂರು: 10ನೇ ಶತಮಾನದಿಂದಲೂ ಭಾರತ ವಿಶ್ವಆರ್ಥವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಇಂದೂ ಭಾರತದಲ್ಲಿಆರ್ಥಿಕ ಶಕ್ತಿ ಅಗಾಧವಾಗಿದೆ. ಆದರೆ ಭಾರತ ಸುಸ್ಥಿರವಾದ ಪ್ರಗತಿಗೆ ಹೆಚ್ಚು ಒತ್ತು ನೀಡಬೇಕುಎಂದು ಹೆಕ್ಸಾಗನ್ ಹೆಲ್ತ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಪ್ರಧಾನ ಸಲಹೆಗಾರರಾದ ಟಿ. ಶ್ರೀಕಾಂತ್ ಭಾಗವತ್ ಹೇಳಿದರು.

ಅವರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್‌ಡೆವಲಪ್‌ಮೆಂಟ್ ಸಂಸ್ಥೆ (ಎಸ್‌ಡಿಎಂಐಎಂಡಿ) ಆಯೋಜಿಸಿದ 'ಗ್ಲೋಬಲ್ ರಿಕವರಿ: ಇಂಡಿಯಾ ಸ್ಟೋರಿ' ವಿಷಯದ ನಾಲ್ಕನೇ ಅಂತರ್‍ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿ ಮಾತನಾಡುತ್ತಿದ್ದರು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉದ್ಯೋಗ ಪ್ರವಾಣಚೆನ್ನಾಗಿದೆ. ಅರ್ಥಿಕ ಪ್ರಗತಿಯನ್ನು ಸುಸ್ಥಿರವಾಗಿಡಲು ಕಲೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವವನ್ನು ಪೋಷಿಸಬೇಕು ಎಂದು ಅವರು ನುಡಿದರು.

ಭಾರತದ ವಿವಿಧ ಭಾಗಗಳಿಂದಲ್ಲದೇ ಆಸ್ಟ್ರೇಲಿಯ, ಫ್ರಾನ್ಸ್, ಯುಎಇ, ಬಹ್ರೇನ್, ಇರಾನ್, ಇಥಿಯೋಪಿಯ, ನೈಜೀರಿಯ, ಯೆಮನ್, ಬಾಂಗ್ಲಾದೇಶ ಮತ್ತು ಮಲೇಷ್ಯದ ಪ್ರತಿನಿಧಿಗಳು ಎರಡು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಆಸ್ಟ್ರೇಲಿಯದ ಬಾಂಡ್‌ಯೂನಿವರ್ಸಿಟಿಯ ಡಾ. ಕುಲದೀಪ್ ಕುಮಾರ್, ಫ್ರಾನ್ಸ್‌ನಡಾ. ಅಪ್ಪಾ ಅರವಿಂದ್, ದುಬೈಯ ಬ್ರಿಟಿಷ್‌ಯೂನಿವರ್ಸಿಟಿಯ ಡಾ. ಇಳಾಂಗೊ ರಂಗಸ್ವಾಮಿ, ಇರಾನಿನ ಇಸ್ಲಾಮಿನಆಜಾದ್‌ಯೂನಿವರ್ಸಿಟಿಯ ಡಾ. ಹಮೀದ್ ಸರೇಮಿ ಮತ್ತು ಭಾರತದಎಸ್‌ಆರ್‌ಎಂಯೂನಿವರ್ಸಿಟಿಯ ಡಾ. ಎಸ್ ವಸುಮತಿ ಹರಿಹರನ್ ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು. ಎಸ್‌ಡಿಎಂಐಎಂಡಿಯ ನಿರ್ದೇಶಕಡಾ. ಎನ್.ಆರ್. ಪರಸುರಾಮನ್ ಸ್ವಾಗತಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಡಾ. ಉಲ್ಲಾಸ್ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು.